ದೇವಸ್ಥಾನ ಮತ್ತು ಚರ್ಚುಗಳ ವಾತಾವರಣವನ್ನು ನೀವು ನಿಮ್ಮ ನಿಮ್ಮ ಮನೆಗಳ ಕೋಣೆಯ ಒಂದು ಮೂಲೆಯಲ್ಲಿಯೇ ನಿರ್ಮಿಸಿಕೊಳ್ಳಲು ಸಾಧ್ಯ. ಏಕೆಂದರೆ ತಡೆಗಳು ಇಲ್ಲದಂತೆ ಒಂದು ಕಡೆ ನಾವು ಒಂದು ಗಾಢವಾದ ಆಲೋಚನೆ ಮಾಡಿದರೆ, ಆ ಸ್ಥಳವು ಆ ಆಲೋಚನೆಯ ಭಾವದಿಂದ ಸಂಕ್ರಮಿತವಾಗಿರುತ್ತದೆ. ಇದು ಸಾಧ್ಯವಾಗುವುದು, ಸುತ್ತಲ ವಾತಾವರಣವು ದೇಹಕ್ಕೆ ಸಂಬಂಧಿತ ವಾಗಿರುವುದರಿಂದ. ಇದರಿಂದಲೇ ಆ ವಾತಾವರಣವು ಮನಸ್ಸಿನ ಆಲೋಚನೆಗಳಿಗೆ ಕೂಡ ಸ್ಪಂದಿಸುತ್ತದೆ. ನಮ್ಮ ಆಲೋಚನೆಗಳು ಪವಿತ್ರವಾಗಿದ್ದರೆ, ನಮ್ಮ ದೇಹವೂ ಪವಿತ್ರವಾಗಿರುತ್ತದೆ ಮತ್ತು ಆಧ್ಯಾತ್ಮಿಕ ಸ್ಪಂದನಗಳಿಂದ ತುಂಬಿರುತ್ತದೆ. ಇದರಿಂದಾಗಿ, ಸುತ್ತಲ ವಾತಾವರಣವೂ ಒಂದು ತೆರನಾದ ಆಧ್ಯಾತ್ಮಿಕ ಶಕ್ತಿಯಿಂದ ತುಂಬಿ, ನಿಮ್ಮ ಧ್ಯಾನಾವಸ್ಥೆಯ ಮನಸ್ಸಿನ ಭಾವವನ್ನು ಪಡೆದುಕೊಳ್ಳುತ್ತದೆ. ಹೀಗಾಗಿ ಅಲ್ಲಿ ಕುಳಿತೊಡನೆ ನಮಗೆ ಭಗವಂತನ ಸಾನ್ನಿಧ್ಯದ ಅನುಭವವಾಗುತ್ತದೆ. ಹೀಗೆ ಧ್ಯಾನಕ್ಕೆ ಒಂದು ನಿರ್ದಿಷ್ಟವಾದ ಸ್ಥಳವನ್ನು ಮೀಸಲಿಡುವುದ ರಿಂದ ಇಂತಹ ಪವಾಡಸದೃಶ ಲಾಭವನ್ನು ಪಡೆಯಬಹುದು.

೪. ನಾನು ಮೇಲೆ ಹೇಳಿದ ಸಾಧನಗಳು ನಮ್ಮ ಮನಸ್ಸಿನೊಳಗೆ ಅಡಗಿರುವ ಸೂಕ್ಷ್ಮ ಶತ್ರುಗಳಾದ ಮೋಹ, ಆವೇಗ, ಲೋಭ, ಅತ್ಯಾಸೆಗಳ ಎದುರು ನಿಲ್ಲಲಾರದು ಎಂದು ನನಗೆ ಗೊತ್ತು. ಅಡಗಿರುವ ಇವುಗಳ ಪ್ರಭಾವದಿಂದ ದೊಡ್ಡ ಮನುಷ್ಯರೂ ತಪ್ಪಿಸಿಕೊಳ್ಳಲಾರರು.

ಚಳಿಗಾಲದಲ್ಲಿ ಕಳೆ ಕಿತ್ತು, ಹಳೆಯ ಟೊಂಗೆಗಳನ್ನು ಕತ್ತರಿಸಿ, ತೋಟವನ್ನು ಶುಚಿಗೊಳಿಸಿದ್ದರೂ, ಕಳೆಗಳ ಪುಟ್ಟ ಚಿಗುರುಗಳು ವಸಂತಕಾಲದಲ್ಲಿ ಮತ್ತೆ ಹಸುರಾಗಿ ತಲೆಯೆತ್ತಲು ಕಾದಿರುತ್ತವೆ. ಅದೇ ರೀತಿ, ನಮ್ಮ ಮನಸ್ಸಿನ ಒಂದು ಮೂಲೆಯಲ್ಲಿ ಮನೆ ಮಾಡಿರುವ ಬಹು ಸೂಕ್ಷ್ಮ ಆಲೋಚನೆಗಳು ಮೊಳಕೆಯೊಡೆದು ಮೇಲೆ ಚಿಮ್ಮಲು ಕಾಯುತ್ತಿರುತ್ತವೆ. ನಾವು ಈ ಕೆಟ್ಟ ಆವೇಗಗಳನ್ನು ನಿಯಂತ್ರಿಸದಿದ್ದರೆ, ಅವು ಬೆಳೆದು ನಮ್ಮ ಪ್ರಜ್ಞೆಯನ್ನು ಆವರಿಸಿಬಿಡುತ್ತವೆ. ಸರಿಯಾದ ದಾರಿಯಲ್ಲಿ ಹರಿಸಿದ ಆಸೆ ಮತ್ತು ಆವೇಗಗಳಿಂದ, ನಮ್ಮ ಮನಸ್ಸಿನ ಬಹುತೇಕ ಭಾಗವು ಮುಕ್ತವಾಗಿರುವಂತೆ ನೋಡಿಕೊಳ್ಳಲು ಶಕ್ತರಾದಾಗ ಮಾತ್ರ, ನಾವು ಭಗವಚ್ಚಿಂತನೆಯನ್ನು ಮಾಡಬಲ್ಲೆವು.

ನಮ್ಮ ಆಸೆಗಳು, ಆವೇಗಗಳನ್ನು ಗೆಲ್ಲಲು ನಾವು ಏನು ಮಾಡಬೇಕು? ನೇರವಾಗಿ ಎದುರಿಸುವುದರಿಂದ ಕೆಲವು ಬಾರಿ ಅವು ಸೋಲುತ್ತವಾದರೂ, ಪರೋಕ್ಷವಾಗಿ ಎದುರಿಸುವುದೇ ಉತ್ತಮ. ಮನಸ್ಸಿನ ಸ್ಥಿತಿಯನ್ನು ಬಲವಾಗಿ ತಗ್ಗಿಸುವುದು ತೊಂದರೆಗೆ ಕಾರಣವಾಗಬಹುದು. ಏಕೆಂದರೆ ಆಗ ಮನಸ್ಸು ಗೊಂದಲಕ್ಕೆ ಒಳಗಾಗುತ್ತದೆ. ಮನಸ್ಸಿನ ಸ್ಥಿತಿಯನ್ನು ಬದಲಾಯಿಸುವ ಬಗ್ಗೆ ಹೆಚ್ಚು ಗಮನ ಕೊಡದೇ ಇರುವುದೇ ಒಳ್ಳೆಯದು. ಇದರಿಂದ ನಿಧಾನವಾಗಿ ಮನಸ್ಸು ತಾನೇ ತಾನಾಗಿ ಹೆಚ್ಚು ಹೆಚ್ಚು ಬಲಗೊಳ್ಳುತ್ತದೆ. ನಿಮ್ಮ ಮನಸ್ಸನ್ನು ಎತ್ತ ಹೋದರತ್ತ ಸ್ವತಂತ್ರವಾಗಿ ಬಿಡಬೇಕು, ನಿಯಂತ್ರಿಸಲೇ ಬಾರದು ಎಂದಾಗಲಿ, ನಿಮ್ಮ ದೌರ್ಬಲ್ಯವನ್ನು ಕಡೆಗಣಿಸಬೇಕು ಎಂದಾಗಲಿ ನಾನು ಹೇಳುತ್ತಿಲ್ಲ. ನೇರವಾಗಿ ಮನಸ್ಸಿನ ಜೊತೆಗೆ ಗುದ್ದಾಡುವುದಕ್ಕಿಂತ, ಕ್ರಮೇಣ ಉನ್ನತ ಮಟ್ಟಕ್ಕೆ ಹೋಗುವಂತೆ, ಮನಸ್ಸಿಗೆ ತರಬೇತಿ ನೀಡುವುದೇ ಉತ್ತಮ.

ತೆಗೆದುಹಾಕಲಾಗದ ದೌರ್ಬಲ್ಯ ಈಗ ನಿಮ್ಮಲ್ಲಿದ್ದರೆ, ಅದರ ಬಗ್ಗೆಯೇ ಯೋಚಿಸುತ್ತ, ಅವಕಾಶ ನೀಡುತ್ತ, ನೀವು ಅದಕ್ಕೆ ಶಕ್ತಿ ತುಂಬುತ್ತಿದ್ದೀರಿ ಎಂದು ಅರ್ಥ. ಆ ಬೆಂಬಲವನ್ನು ಮೊದಲು ತಪ್ಪಿಸಿ. ಆಗ ಆ ದೌರ್ಬಲ್ಯವು ತನ್ನ ಶಕ್ತಿಯನ್ನು ಕಳೆದುಕೊಂಡು, ಕೊನೆಗೆ ನಾಶವಾಗುತ್ತದೆ. ಇದು ಸುಲಭವೆಂದು ನಾನು ಹೇಳಲಾರೆ. ಅಭ್ಯಾಸ ಮಾಡುತ್ತ ಹೋದರೆ, ಅದು ರೂಢಿಯಾಗಿ ಆಧ್ಯಾತ್ಮಿಕ ಸಾಧನೆಗೆ ದಾರಿಯಾಗುತ್ತದೆ. ಬೇಡದ ಆಲೋಚನೆಗಳಿಗೆ ನೀವು ಅವಕಾಶ ನೀಡಬಾರದು. ಸ್ವಲ್ಪ ಕಾಲ ಕಳೆದ ಮೇಲೆ, ಅವುಗಳಲ್ಲಿ ಕೆಲವು ಕಾಣೆಯಾಗಿದ್ದರೂ, ಇನ್ನು ಕೆಲವು ಉಳಿದುಕೊಂಡಿರುತ್ತವೆ. ಆದರೆ ಅವು ಅಶಕ್ತವಾಗಿರುತ್ತವೆ. ಅವು ಉಳಿದುಕೊಂಡಿದ್ದರೆ ಇರಲಿ, ಬಿಡಿ– ದುರ್ಬಲವಾಗಿರುವ ಅವೂ ಕೂಡ ಕ್ರಮೇಣ ಮಾಯವಾಗುತ್ತವೆ.

(ಮುಂದುವರಿಯುತ್ತದೆ)

(ಸಂಗ್ರಹಾನುವಾದ: ಡಾ. ಪಾಂಡುರಂಗ ವಿಠಲ)

## ಚಿಂತನ ಪ್ರಭ

### ನವರಾತ್ರಿ

ದಸರಾ (ದಶಹರ), ಮಹಾನವಮಿ, ಬನ್ನಿಹಬ್ಬ ಮುಂತಾದ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುವ ನವರಾತ್ರಿ ರಾಷ್ಟ್ರೀಯ ಹಬ್ಬ. ಬಂಗಾಳದಲ್ಲಿ ಅದಕ್ಕೆ 'ದುರ್ಗಾಪೂಜೆ' ಎಂದು ಹೆಸರು; ಉತ್ತರಭಾರತದಲ್ಲಿ ಅದು ಶ್ರೀರಾಮವಿಜಯವನ್ನು ಸಂಕೇತಿಸುವ 'ರಾಮಲೀಲಾ.' ಅತ್ಯಂತ ಸಂಕೀರ್ಣವೂ ವರ್ಣರಂಜಿತವೂ ಆದ ನವರಾತ್ರಿ 'ಮಹಾಪೂಜೆ' ಎಂಬ ಅಗ್ಗಳಿಕೆಗೆ ಪಾತ್ರವಾದುದು; ಪೌರಾಣಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ – ಹೀಗೆ ಅನೇಕ ಆಯಾಮಗಳನ್ನುಳ್ಳದ್ದು. ಅದಕ್ಕೆ ಕನಿಷ್ಠ ೨,೦೦೦ ವರ್ಷಗಳ ಪ್ರಾಚೀನತೆ ಇದೆ.

ನವರಾತ್ರಿ ಪರ್ವದ ಮೂಲದಲ್ಲಿರುವುದು ಶಕ್ತಿದೇವತೆಯ ಉಪಾಸನೆ. ಕಾಳಿ, ದುರ್ಗೆ, ಲಕ್ಷ್ಮಿ, ಸರಸ್ವತಿ ಇತ್ಯಾದಿಗಳೆಲ್ಲ ಶಕ್ತಿಯ ಭಿನ್ನ ಅಂಶಗಳೇ. ನವರಾತ್ರಿಯಲ್ಲಿ ಇವರೆಲ್ಲರಿಗೂ ಹರಕೆ ಸಲ್ಲುತ್ತದೆ. ಮುಖ್ಯವಾಗಿ ದುರ್ಗೆ ಅಥವಾ ಮಹಿಷಮರ್ದಿನಿ ದಸರೆಯ ಅಧಿದೈವ. (ಅವಳಿಗೆ 'ಚಾಮುಂಡಿ' ಎಂದೂ ಹೆಸರು). ಅವಳು ಲೋಕಕಂಟಕನೂ ಸುರಭಯಂಕರನೂ ಆಗಿದ್ದ ಮಹಿಷಾಸುರನನ್ನು ಸಂಹರಿಸಿದ ದೇವಿ. ಅವಳದು ಸಮಷ್ಟಿರೂಪ ಮತ್ತು ಸ್ವರೂಪ. ಬ್ರಹ್ಮ, ವಿಷ್ಣು, ಮಹೇಶ್ವರರ ತೇಜಸ್ಸಿನಿಂದ ಅವಳು ಹುಟ್ಟಿದವಳು; ಎಲ್ಲ ದೇವತೆಗಳಿಂದಲೂ ಅವರವರ ಆಯುಧಗಳನ್ನು ಸ್ವೀಕರಿಸಿ, ಅವಳು ಮಹಿಷನ ನಿಗ್ರಹ ಮಾಡುತ್ತಾಳೆ. ಇದು ಪುರಾಣಕಥೆ.

ಇದೊಂದು 'ಪ್ರತಿಮೆ'ಯಷ್ಟೆ. ಆಸುರೀಶಕ್ತಿಯ ಮೇಲೆ ದೈವೀ ಶಕ್ತಿಯ, ತಾಮಸ ಶಕ್ತಿಯ ಮೇಲೆ ಸಾತ್ವಿಕ ಶಕ್ತಿಯ ಗೆಲುವು ಮಹಿಷಮರ್ದಿನಿಯ ಕತೆಯಲ್ಲಿ ಅಂತರ್ಗತ. ಈ ಗೆಲುವು ಇಂದಿಗೂ, ಎಂದಿಗೂ ಸ್ಮರಣೀಯ. ಸೀಮೋಲ್ಲಂಘನವೂ ಅಷ್ಟೆ; ಅವಿದ್ಯೆಯ ಗಡಿಯನ್ನು ಸದಾ ದಾಟುತ್ತಿರಲೇಬೇಕಲ್ಲವೇ! ಎಂತಲೇ ನವರಾತ್ರಿಯು ಅನುಸಂಧಾನ ಉತ್ಸವ. 'ನವರಾತ್ರಿ' ಎಂಬುದು ಹಬ್ಬದ ಹೆಸರಾದರೂ, ಅದರಲ್ಲಿ ಕತ್ತಲೆಯ ಪ್ರಸಕ್ತಿಯಿಲ್ಲ; ಇರುವುದೆಲ್ಲ ಬೆಳಕಿನ, ದೀಪರಾಜಿಯ ಪ್ರಸಕ್ತಿಯೇ: 'ತಮಸೋ ಮಾ ಜ್ಯೋತಿರ್ಗಮಯ!'

–ಡಾ. ಸಿ.ಪಿ. ಕೃಷ್ಣಕುಮಾರ್ ('ಪರಿಚಿಂತನ')